



## ರಮ್ಯ ಕಲ್ಪನೆಯೊ?

ಸಾವಯವ ಕೃಷಿ 'ಮರಳಿ ಮಣ್ಣಿಗೆ' ಪರಿಕಲ್ಪನೆಗೆ ಹತ್ತಿರವಾದುದು. ರಸಗೊಬ್ಬರವನ್ನು ನೆಚ್ಚಿದ ಆಧುನಿಕ ಕೃಷಿಗೆ ಭಿನ್ನವಾದ ನಡೆಯ ಸಾವಯವ ಕೃಷಿ ಪರಿಸರ ಸಂರಕ್ಷಣೆಗೂ ಪೂರಕವಾದುದು. ಹೊಲ ನೆಲದ ಸಾರ ಸಂರಕ್ಷಣೆಯ ಜೊತೆಗೆ ಜನರ ಆರೋಗ್ಯಕ್ಕೂ ಇದು ಸಹಕಾರಿ. ಆದರೆ, ಬೃಹತ್ ಜನಸಂಖ್ಯೆಯ ಭಾರತದಂತಹ ದೇಶಗಳಲ್ಲಿ ಸಂಪೂರ್ಣ ಸಾವಯವ ಕೃಷಿ ಕಷ್ಟಸಾಧ್ಯವೇ ಸರಿ. ಸಾವಯವ ಕೃಷಿ ಸದ್ಯಕ್ಕೆ ತುಟ್ಟಿಯ ಬಾಬತ್ತೂ ಹೌದು. ಅಡೆತಡೆಗಳ ನಡುವೆಯೂ ಸಾವಯವ ಕೃಷಿಯ ಪ್ರಮಾಣ ಭಾರತದಲ್ಲಿ ಗಣನೀಯವಾಗಿ ಹೆಚ್ಚುತ್ತಿದೆ. ವಿಶ್ವ ಕೂಡ ವಿಷಮುಕ್ತ ಆಹಾರದ ಬಗ್ಗೆ ಆಸೆಗಣ್ಣಿನಿಂದಿದೆ. ಸಾವಯವ ಕೃಷಿಯ ಸ್ವರೂಪ, ಸವಾಲು, ಬೆಳವಣಿಗೆ, ಪೇಟೆಧಾರಣೆ, ಸೇರಿದಂತೆ ಹಲವು ಸಂಗತಿಗಳನ್ನು ಚರ್ಚಿಸುವ ಈ ಬರಹ, ನೆಮ್ಮದಿಯ ಬದುಕು ಮತ್ತು ಸಮಾಜಕ್ಕೆ ಅಗತ್ಯವಾದ ಸಂಗತಿಗಳ ಬಗ್ಗೆ ಸಹೃದಯರ ಗಮನಸೆಳೆಯುವಂತಿದೆ.

**■ ಸುಚಿತ್ರಾ ಹೆಗಡೆ**

